DEEDS Since 1982

ಸಂವಾದ 3

ಖಾಸಗಿ ಪ್ರಸಾರಕ್ಕಾಗಿ ಮಾತ್ರ

# DEEDS ಸಂವಾದ

## ಸಮತೆಯ ಸಮಾಜದೆಡೆಗೆ

## ನಿರ್ದೇಶಕರ ಮಾತು

ಕೋವಿಡ್‌ನ ವಿವಿಧ ಪರಿಣಾಮಗಳನ್ನು ನಾವೆಲ್ಲಾ ಅನುಭವಿಸುತ್ತಿದ್ದೇವೆ. ಜಾಗರೂಕತೆ ವಹಿಸಿ ನಮ್ಮೆಲ್ಲಾ ಚಟುವಟಿಕೆಗಳನ್ನು ಮುಂದುವರಿಸಬೇಕಾದುದು ನಮ್ಮೆಲ್ಲರ ಕರ್ತವ್ಯವೂ ಹೌದು. ಕೋವಿಡ್ ಎರಡನೆಯ ಅಲೆಯ ಸಂದರ್ಭದಲ್ಲಿ ನಮ್ಮ ಕಾನೂನು ಸುಗಮಕಾರರು ಕೋವಿಡ್ ಬಗ್ಗೆ ಜಾಗೃತಿ, ಅಗತ್ಯವಿರುವವರಿಗೆ ಮಾಸ್ಕ್ ಹಾಗೂ ಆಹಾರ ಸಾಮಗ್ರಿಗಳನ್ನು ಒದಗಿಸಿರುತ್ತಾರೆ. ಜತೆಗೆ ಲಾಕ್‌ಡೌನ್ ಸಮಯದಲ್ಲಿ ಹಿಂಸೆಯಿಂದ ಬಳಲುತ್ತಿರುವ ಮಹಿಳೆಯರಿಗೆ ಸಾಂತ್ವನ ಮತ್ತು ಮಾರ್ಗದರ್ಶನ ನೀಡಿದ್ದಾರೆ. ಹೀಗೆ ಸಮಾಜಮುಖಿ ಕಾರ್ಯಗಳಲ್ಲಿ ತೊಡಗಿಕೊಂಡ ಸುಗಮಕಾರರಿಗೆ ಹಾಗೂ ಸದ್ದಿಲ್ಲದೆ ಕೋವಿಡ್ ಸಮಯದಲ್ಲಿ ಇಂತಹ ಸೇವೆ ಸಲ್ಲಿಸಿದ, ಸಲ್ಲಿಸುತ್ತಿರುವ ತಮಗೆಲ್ಲಾ ಧನ್ಯವಾದಗಳು.

ಕೋವಿಡ್ ಲಾಕ್‌ಡೌನ್ ಸಮಯದಲ್ಲಿ ಉತ್ತರ ಕರ್ನಾಟಕದ ಜಿಲ್ಲೆಗಳಲ್ಲಿ ಹಲವು ಬಾಲ್ಯವಿವಾಹ, ಕೌಟುಂಬಿಕ ದೌರ್ಜನ್ಯ, ಲೈಂಗಿಕ ಅಪರಾಧಗಳ ಘಟನೆಗಳು ನಡೆದಿವೆ. ಇದರಿಂದ ಹಲವಾರು ಮಹಿಳೆಯರು, ಬಾಲೆಯರು ಹಿಂಸೆಯನ್ನು ಅನುಭವಿಸಿದ್ದಾರೆ. ಜೂನ್24ರ ದಿ ಹಿಂದೂ ನ್ಯೂಸ್ ಪೇಪರ್‌ನಲ್ಲಿ ಪ್ರಕಟವಾದಂತೆ ಜನವರಿ ಮತ್ತು ಮೇ 2021 ಮಧ್ಯದಲ್ಲಿ 2383 ಕೌಟುಂಬಿಕ ದೌರ್ಜನ್ಯ ಕೇಸುಗಳು ದಾಖಲಾಗಿವೆ. ಇದು ಕಳೆದ 21 ವರ್ಷಗಳಿಂದ ಅಧಿಕವಾಗಿದೆ ಎಂದು ತಿಳಿಸಿದೆ. ಕರ್ನಾಟಕದಲ್ಲಿ 70.8% ಮಹಿಳೆಯರು ತಮಗಾದ ಹಿಂಸೆಯ ಬಗ್ಗೆ ಯಾರ ಬಳಿಯೂ ತಿಳಿಸಿಲ್ಲ ಮತ್ತು ಕಾನೂನಾತ್ಮಕ ಸಲಹೆ ಪಡೆದಿಲ್ಲ. 12.6% ಮಹಿಳೆಯರು ತಮ್ಮ ಹತ್ತಿರದ ಸಂಬಂಧಿಕರ ಬಳಿ ಹೇಳಿಕೊಂಡಿದ್ದಾರೆ. 16.7% ಮಹಿಳೆಯರು ಮಾತ್ರ ಸಲಹೆ ಪಡೆಯಲು ಮುಂದಾಗಿದ್ದಾರೆ. 14.3% ಮಹಿಳೆಯರು ಡಾಕ್ಟರ್ ಮತ್ತು ದಾದಿಯರ ಬಳಿ ಹೇಳಿದ್ದಾರೆ, 14.3% ಮಹಿಳೆಯರು ಪೋಲಿಸ್ ಠಾಣೆ ಹತ್ತಿದ್ದಾರೆ, 14.3% ಮಹಿಳೆಯರು ವಕೀಲರ ಸಹಾಯ ಪಡೆದಿದ್ದಾರೆ, 14.1% ಮಹಿಳೆಯರು ಸಂಸ್ಥೆಗಳ ಸಹಾಯ ಪಡೆದಿದ್ದಾರೆ.

ಭಾರತೀಯ ಮಹಿಳೆಯರ ಸ್ಥಿತಿಗತಿ ಸುಧಾರಿಸಲು ಅವರಿಗೂ ಜೀವನದ ಎಲ್ಲಾ ಕ್ಷೇತ್ರಗಳಲ್ಲಿ ಸ್ವಾತಂತ್ರ್ಯ ಮತ್ತು ಸಮಾನ ಅವಕಾಶಗಳನ್ನು ನೀಡಲಾಗಿದೆ. ಹಳೆಯ ಮಹಿಳಾ ಕಾನೂನುಗಳಿಗೆ ತಿದ್ದುಪಡಿ ಮಾಡಲಾಗಿದೆ. ಅದರೆ ಈ ಕಾನೂನುಗಳ ಸಮರ್ಪಕ ಅನುಷ್ಠಾನ ಇನ್ನೂ ಸಾಧ್ಯವಾಗಿಲ್ಲ. ಮೇಲಿನ ಅಂಕಿಅಂಶಗಳು ಸಮಾಜದ ಸ್ಥಿತಿಗತಿಯನ್ನು, ಮಹಿಳೆಯರ ಸ್ಥಿತಿಗತಿಯನ್ನು, ಅರಿವಿನ ಅವಕಾಶಗಳ ಕಾರ್ಯಗತ ಸ್ಥಿತಿಯನ್ನು ತಿಳಿಸುತ್ತದೆ. ಮಹಿಳೆಯರೂ ಸೇರಿ ಸಮಾಜದಲ್ಲಿ ಮಹಿಳೆಯರ ಕಾನೂನುಗಳ ಅರಿವಿನ ಬಹುವಾದ ಕೊರತೆ ಇದೆ. ಸಮಸ್ಯೆಗಳು ಉಂಟಾದಾಗ ಅದಕ್ಕೆ ಪ್ರತಿಕ್ರಿಯಿಸುವ, ಎದುರಿಸುವ ಪ್ರಜ್ಞೆ ಬಹಳ ಕಡಿಮೆ ಇದೆ. ಹಾಗಾಗಿಯೇ ಇಂತಹ ಸಮಸ್ಯೆಗಳು ಸದಾ ನಡೆಯುತ್ತಿರುತ್ತದೆ.

ಈ ಹಿನ್ನೆಲೆಯಲ್ಲೇ ತಳಹಂತದ ಮಹಿಳೆಯರು ಮತ್ತು ಕಾರ್ಯಕರ್ತರಲ್ಲಿ ಮಾಹಿತಿ ಪಸರಿಸುವ ಕೆಲಸವನ್ನು ಡೀಡ್ಸ್ ತನ್ನ ತರಬೇತಿಗಳ ಮೂಲಕ ಮಾಡುತ್ತಿದೆ. ಕರ್ನಾಟಕದ ನಾಲ್ಕು ಜಿಲ್ಲೆಗಳಾದ ಉತ್ತರ ಕನ್ನಡ, ಧಾರವಾಡ, ಬಳ್ಳಾರಿ, ಬಾಗಲಕೋಟೆಗಳಲ್ಲಿ ಪೂರಕ ಸುಗಮಕಾರರನ್ನು ತರಬೇತಿಗೊಳಿಸಲಾಗುತ್ತಿದೆ. ಈಗಾಗಲೇ ಉತ್ತರ ಕನ್ನಡ ಮತ್ತು ಧಾರವಾಡ ಜಿಲ್ಲೆಗಳಲ್ಲಿ ಲಿಂಗತ್ವ, ಮಹಿಳಾ ಕಾನೂನು ಕುರಿತು ತರಬೇತಿಗಳನ್ನು ಪೂರೈಸಿ, ಮೂರನೇ ಹಂತದಲ್ಲಿ ಮಹಿಳಾ ಪ್ರಕರಣಗಳ ನಿರ್ವಹಣೆಯ ಬಗ್ಗೆ ತರಬೇತಿಯನ್ನು ಆಯೋಜಿಸಿದೆ. ಪ್ರಕರಣವೊಂದನ್ನು ನಿರ್ವಹಿಸುವಾಗ ತೆಗೆದುಕೊಳ್ಳಬೇಕಾದ ಎಚ್ಚರಿಕೆಗಳು, ಕಾರ್ಯತಂತ್ರಗಳು ಇತ್ಯಾದಿಗಳ ಕುರಿತು ಮಾಹಿತಿ ತಮಗೆಲ್ಲಾ ಸಿಗಲಿದೆ. ತಳಹಂತದ ಮಹಿಳೆಯರನ್ನು ಉದ್ದೇಶಿಸಿ ಮತ್ತೆ ಕಾನೂನಿನ ಅರಿವು, ಯಾವುದೇ ಸಮಸ್ಯೆಯನ್ನು ಎದುರಿಸಲು ಸಾಕ್ಷ್ಯ-ದಾಖಲೆಗಳ ಮಹತ್ವದ ಬಗ್ಗೆ ವ್ಯಾಪಕ ಜಾಗೃತಿ ನಡೆಯಲಿದೆ. ತಿಳಿದುಕೊಂಡ ಮಾಹಿತಿಯನ್ನು ಮನೆಯವರಿಗೆ, ನೆರೆಕರೆಯಲ್ಲಿ, ಸ್ವಸಹಾಯ ಗುಂಪುಗಳಲ್ಲಿ, ಸಂಘಸಂಸ್ಥೆಗಳಲ್ಲಿ ಹಂಚಿಕೊಳ್ಳುವುದು ನಮ್ಮೆಲ್ಲರ ಜವಾಬ್ದಾರಿಯಾಗಿದೆ. ಅಲ್ಲದೆ ಹಿಂಸೆಯಿಂದ ಬಳಲುತ್ತಿರುವ ಮಹಿಳೆಯರಿಗೆ ಸಾಂತ್ವನ, ಪ್ರೋತ್ಸಾಹ, ಸಹಕಾರ, ಸಹಾಯ, ದೂರು ನೀಡುವುದನ್ನು ನಾವೆಲ್ಲಾ ಮಾಡಲೇಬೇಕಾಗಿದೆ. ಜತೆಗೆ ಸರಕಾರದ ಇಲಾಖೆಗಳು-ವ್ಯವಸ್ಥೆಗಳನ್ನು ಸಂಪರ್ಕಿಸಿ ಚರ್ಚೆ, ಸಲಹೆಗಳು ಬೇಕಾಗಿದೆ. ಈವರೆಗೆ ನಮ್ಮ ಯೋಜನೆ ಚಟುವಟಿಕೆಗಳಿಗೆ ಪ್ರೋತ್ಸಾಹ ನೀಡಿದ ತಮ್ಮೆಲ್ಲರ ಸಹಕಾರವನ್ನು ಈ ಅವಧಿಯಲ್ಲೂ ನಿರೀಕ್ಷಿಸುತ್ತೇವೆ.

**ಮರ್ಲಿನ್ ಮಾರ್ಟಿಸ್**

## ಆಸ್ತಿಯಲ್ಲಿ ಹೆಣ್ಣು ಮಕ್ಕಳಿಗೆ ಸಮಾನ ಪಾಲು - ಇತ್ತೀಚಿನ ತೀರ್ಪು

1956ರ ಹಿಂದೂ ಉತ್ತರಾಧಿಕಾರ ಕಾಯ್ದೆಯು 2005ರಂದು ತಿದ್ದುಪಡಿಗೊಂಡಿದ್ದು, ಹೆಣ್ಣು ಮಕ್ಕಳಿಗೂ ಪಿತ್ರಾರ್ಜಿತ ಆಸ್ತಿಯಲ್ಲಿ ಗಂಡು ಮಕ್ಕಳಂತೆ ಸಮಾನ ಹಕ್ಕು ನೀಡಿತು. ಆದರೆ 09.09.2005ರ ತಿದ್ದುಪಡಿಯ ಸಂದರ್ಭ ತಂದೆಯು ಜೀವಂತವಾಗಿದ್ದರೆ ಮಾತ್ರ ಹೆಣ್ಣು ಮಗುವಿಗೆ ಪಿತ್ರಾರ್ಜಿತ ಆಸ್ತಿಯಲ್ಲಿ ಸಮಾನ ಪಾಲು ನೀಡುವಂತೆ ಕೆಲವು ನ್ಯಾಯಾಲಯಗಳು ತೀರ್ಪುಗಳನ್ನು ಹೊರಡಿಸಿ ಗೊಂದಲ ಸೃಷ್ಟಿಸಿತು. ಈ ತೀರ್ಪುಗಳ ಅನ್ವಯ 2005ರ ಮುಂಚೆ ಹುಟ್ಟಿದ ಹೆಣ್ಣು ಮಕ್ಕಳಿಗೆ ಪಿತ್ರಾರ್ಜಿತ ಆಸ್ತಿಯಲ್ಲಿ ಸಮಾನ ಪಾಲು ದೊರೆಯುವುದೋ ಇಲ್ಲವೋ ಎಂಬ ಪ್ರಶ್ನೆಯು ಮೂಡಿತು. ಈ ಗೊಂದಲವನ್ನು ನಿವಾರಿಸುವ ನಿಟ್ಟಿನಿಂದ ಮೂವರು ಸದಸ್ಯರನ್ನೊಳಗೊಂಡ ಸರ್ವೋಚ್ಚ ನ್ಯಾಯಪೀಠವು 11.08.2020ರಂದು ಹೆಣ್ಣು ಮಕ್ಕಳ ಪರ ಶ್ಲಾಘನೀಯ ತೀರ್ಪು ಘೋಷಿಸಿದೆ. **ವಿನೀತಾ ಶರ್ಮ ವರ್ಸಸ್ ರಾಕೇಶ್ ಶರ್ಮ** ವ್ಯಾಜ್ಯದಲ್ಲಿ 2005ರ ತಿದ್ದುಪಡಿಯ ಸಂದರ್ಭ ತಂದೆ ಜೀವಂತವಾಗಿರಲಿ ಅಥವಾ ಇಲ್ಲದೇ ಇರಲಿ, ಹೆಣ್ಣು ಮಗು ಹುಟ್ಟಿದ ಕ್ಷಣವೇ ಆಕೆಯು ಪಿತ್ರಾರ್ಜಿತ ಆಸ್ತಿಯಲ್ಲಿ ಗಂಡು ಮಕ್ಕಳಂತೆ ಸಮಾನ ಹಕ್ಕು ಪಡೆಯುತ್ತಾಳೆ ಎಂದು ಘೋಷಿಸಿದೆ.



# ಪೂರಕ ಕಾನೂನು ತರಬೇತಿ ಕಾರ್ಯಕ್ರಮ

## ಧಾರವಾಡ ಜಿಲ್ಲೆ




ಪೂರಕ ಕಾನೂನು ಸುಗಮಕಾರರ ಮೊದಲ ಮತ್ತು ದ್ವಿತೀಯ ಹಂತದ ಲಿಂಗತ್ವ ಮತ್ತು ಮಹಿಳಾ ಕಾನೂನುಗಳ ಬಗೆಗಿನ ತರಬೇತಿಯು ಕ್ರಮವಾಗಿ 21-24/3/2021 ಮತ್ತು 25-27/3/2021ರಂದು ನಡೆಯಿತು. ಮೊದಲ ಹಂತದ ಕಾರ್ಯಕ್ರಮವನ್ನು ಹುಬ್ಬಳ್ಳಿಯ ಕರ್ನಾಟಕ ರಾಜ್ಯ ಕಾನೂನು ವಿಶ್ವ ವಿದ್ಯಾಲಯದ ಉಪಕುಲಪತಿಗಳಾದ ಗೌರವಾನ್ವಿತ ಪಿ. ಈಶ್ವರ ಭಟ್ ಉದ್ಘಾಟಿಸಿದರು. ಧಾರವಾಡ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಚಿನ್ನಣ್ಣವರ ಆರ್‌ಎಸ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಜಿಲ್ಲಾ ನಿರೂಪಣಾಧಿಕಾರಿ ಎನ್ ಪುಟ್ಟಣ್ಣನವರ್, ಧಾರವಾಡ



ಸೆಲೇಸಿಯನ್ ಸೊಸೈಟಿಯ ನಿರ್ದೇಶಕರಾದ ಫಾದರ್ ಪೀಟರ್ ಪಿಂಟೊ, ಡೀಡ್ಸ್ ನಿರ್ದೇಶಕಿ ಮರ್ಲಿನ್ ಮಾರ್ಟಿಸ್ ಉಪಸ್ಥಿತರಿದ್ದರು.

2ನೇ ಹಂತದ ಮಹಿಳಾ ಕಾನೂನುಗಳ ಬಗೆಗಿನ ತರಬೇತಿಯು ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸಭಾಂಗಣದಲ್ಲಿ ನಡೆಯಿತು. ಕೌಟುಂಬಿಕ ದೌರ್ಜನ್ಯ ತಡೆ ಕಾಯ್ದೆ, ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣಾ ಕಾಯ್ದೆ, ಆಸ್ತಿ ಹಕ್ಕುಗಳ ಬಗ್ಗೆ ಮಾಹಿತಿ, ಜಿಲ್ಲಾ ನ್ಯಾಯಾಲಯದಲ್ಲಿ ನಡೆಯುವ ಮೊಕದ್ದಮೆಗಳ ವಿಚಾರಣಾ ಪ್ರಕ್ರಿಯೆಯ ವೀಕ್ಷಣೆ ಮಾಡಲಾಯಿತು. ಕಾನೂನು ಸೇವಾ ಪ್ರಾಧಿಕಾರದ ವಕೀಲಾರದ ನೂರ್‌ಜಹಾನ್, ಆಶಾ, ಸಖಿ ಕೇಂದ್ರದ ವಕೀಲರಾದ ಶ್ರೀದೇವಿ ಮತ್ತು ಸುನಂದ, ಮಕ್ಕಳ ರಕ್ಷಣಾಧಿಕಾರಿ ಶಾರದಾ ನಾಡಗೌಡರ್, ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಚಿನ್ನಣ್ಣವರ ಆರ್‌ಎಸ್, ಮರ್ಲಿನ್ ಮಾರ್ಟಿಸ್, ತುಕಾರಾಮ ಎಕ್ಕಾರು, ದೀಪಾ ಎಮ್, ಜೆಸಿಂತಾ, ನಸ್ರೀನ್ ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸಿದ್ದರು. ಒಟ್ಟು 31 ಸುಗಮಕಾರರು ಭಾಗವಹಿಸಿದ್ದರು.

## ಉತ್ತರ ಕನ್ನಡ ಜಿಲ್ಲೆ



ಪೂರಕ ಕಾನೂನು ಸುಗಮಕಾರರ 2ನೇ ಹಂತದ ಮಹಿಳಾ ಕಾನೂನುಗಳ ಬಗೆಗಿನ ತರಬೇತಿಯು 15-3-2021ರಿಂದ 18-3-2021ರ ವರೆಗೆ ಹೊನ್ನಾವರದ ದಿ ಸೋಶಿಯಲ್ ಕ್ಲಬ್‌ನಲ್ಲಿ ನಡೆಯಿತು. ಕೌಟುಂಬಿಕ ದೌರ್ಜನ್ಯ ತಡೆ ಕಾಯ್ದೆ, ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣಾ ಕಾಯ್ದೆ, ಆಸ್ತಿ ಹಕ್ಕುಗಳ ಬಗ್ಗೆ ಮಾಹಿತಿ, ಕಾರವಾರದಲ್ಲಿರುವ ಜಿಲ್ಲಾ ನ್ಯಾಯಾಲಯದಲ್ಲಿ ನಡೆಯುವ ಮೊಕದ್ದಮೆಗಳ ವಿಚಾರಣಾ ಪ್ರಕ್ರಿಯೆಯ ವೀಕ್ಷಣೆ, ಮಗುಸ್ನೇಹಿ ನ್ಯಾಯಾಲಯ ವೀಕ್ಷಣೆ ಮಾಡಲಾಯಿತು ಕಾನೂನು ಸೇವಾ ಪ್ರಾಧಿಕಾರದ ವಕೀಲರಾದ ವರದಾ ಡಿ, ನಿತಿನ್ ರಾಯ್ಕರ್, ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ, ಮರ್ಲಿನ್ ಮಾರ್ಟಿಸ್, ತುಕಾರಾಮ ಎಕ್ಕಾರು, ದೀಪಾ ಎಮ್, ಎರ್ಮಿಲಿನ್ ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸಿದ್ದರು. ಒಟ್ಟು 15 ಸುಗಮಕಾರರು ಭಾಗವಹಿಸಿದ್ದರು.

# ತಳಮಟ್ಟದ ಮಾಹಿತಿ ಕಾರ್ಯಕ್ರಮ

## ಧಾರವಾಡ ಜಿಲ್ಲೆ



ತರಬೇತಿ ಪಡೆದ 31 ಸುಗಮಕಾರರು ಮೊದಲ ಹಂತದ ಹೆಣ್ಣು ಗಂಡು ತಾರತಮ್ಯಕ್ಕೆ ಸಂಬಂಧಿಸಿ 60 ತಳಮಟ್ಟದ ಮಾಹಿತಿ ಕಾರ್ಯಕ್ರಮಗಳನ್ನು ನಡೆಸಿ 1553ಕ್ಕೂ ಹೆಚ್ಚು ಮಂದಿಗೆ ಮಾಹಿತಿಯನ್ನು ನೀಡಿರುತ್ತಾರೆ.

## ಉತ್ತರ ಕನ್ನಡ ಜಿಲ್ಲೆ

ಮೊದಲ ಹಂತದ ಹೆಣ್ಣು ಗಂಡು ತಾರತಮ್ಯ ತರಬೇತಿ ಪಡೆದ 25 ಸುಗಮಕಾರರು 48 ತಳಮಟ್ಟದ ಮಾಹಿತಿ ಕಾರ್ಯಕ್ರಮಗಳನ್ನು ನಡೆಸಿ 1123ಕ್ಕೂ ಹೆಚ್ಚು ಮಂದಿಗೆ ಮಾಹಿತಿಯನ್ನು ನೀಡಿರುತ್ತಾರೆ. ಈ ಮಾಹಿತಿ ಕಾರ್ಯಕ್ರಮದಲ್ಲಿ ಭಾಗವಹಿಸಿದ ಪ್ರತಿಯೊಬ್ಬರೂ ಅವರ ಹತ್ತಿರದ 10 ಮನೆಗಳಿಗೆ ಲಿಂಗತಾರತಮ್ಯದ ಬಗ್ಗೆ ಮಾಹಿತಿ ನೀಡಿರುತ್ತಾರೆ.



# ಜಿಲ್ಲಾ ಪೂರಕ ಕಾನೂನು ಸುಗಮಕಾರರ ಸಮುಚ್ಚಯದ ಚಟುವಟಿಕೆಗಳು

## ದಕ್ಷಿಣ ಕನ್ನಡ ಜಿಲ್ಲೆ

ಸುಗಮಕಾರರ ಸಮುಚ್ಚಯದ ಸಭೆಯು 12-1-2021, 9-2-2021, 5-3-2021, 16-4-2021, 11-5-2021 ಮತ್ತು 13-7-2021 ರಂದು ನಡೆಯಿತು. ಸಭೆಗಳಲ್ಲಿ ಸದಸ್ಯತ್ವ ನವೀಕರಣ, ಹೊಸ ಸುಗಮಕಾರರಿಗೆ ಪೂರಕ ಕಾನೂನು ತರಬೇತಿ, ತಳಮಟ್ಟದ ಮಾಹಿತಿ ಕಾರ್ಯಕ್ರಮಗಳು, ಮಹಿಳಾ ಪ್ರಕರಣಗಳ ನಿರ್ವಹಣೆ ಬಗ್ಗೆ ಚರ್ಚಿಸಲಾಯಿತು.



30-1-2021 ಮತ್ತು 8-3-2021ರಂದು ದಕ್ಷಿಣ ಕನ್ನಡ ಜಿಲ್ಲಾ ಮಹಿಳಾ ತರಬೇತುದಾರರ ಸಂಚಲನ ಮತ್ತು ತಾಲೂಕು ಕಾನೂನು ಸೇವೆಗಳ ಸಮಿತಿ ಸಹಭಾಗಿತ್ವದೊಂದಿಗೆ ಲಿಂಗತ್ವ ಬಗ್ಗೆ ಮೊದಲ ಹಂತದ ಪೂರಕ ಕಾನೂನು ತರಬೇತಿಯು ಪುತ್ತೂರು ಮತ್ತು ಸುಳ್ಯ ತಾಲೂಕುಗಳಲ್ಲಿ ನಡೆಯಿತು. 24-2-2021ರಂದು ಪೂರಕ ಕಾನೂನು ಸುಗಮಕಾರರು ಮಹಿಳಾ ಪೊಲೀಸ್ ಠಾಣೆ, ಸಾಂತ್ವನ ಕೇಂದ್ರ, ಸಖಿ ಕೇಂದ್ರದ ವೀಕ್ಷಣೆ ಮಾಡಿ ಮಾಹಿತಿಗಳನ್ನು ಪಡೆದುಕೊಂಡರು.

## ಗದಗ ಜಿಲ್ಲೆ



21–2–2021 ಮಹಿಳಾ ಕಾನೂನುಗಳ ಬಗ್ಗೆ ಪುನರ್ ಮನನ ತರಬೇತಿಯನ್ನು ಹಮ್ಮಿಕೊಳ್ಳಲಾಯಿತು. ಈ ಕಾರ್ಯಕ್ರಮದಲ್ಲಿ ಹದಿನೈದು ಜನ ಭಾಗವಹಿಸಿದ್ದರು.

ಸುಗಮಕಾರರ ಸಮುಚ್ಚಯದ ಸಭೆಯು 20-3-2021ರಂದು ನಡೆಯಿತು. ಸ್ವಸಹಾಯ ಗುಂಪಿನ ಬಗ್ಗೆ, ಉಳಿತಾಯ ಖಾತೆ ತೆರೆಯುವ ಬಗ್ಗೆ, ಮಹಿಳಾ ಪ್ರಕರಣಗಳ ನಿರ್ವಹಣೆ ಬಗ್ಗೆ ಚರ್ಚಿಸಲಾಯಿತು.

17–7–2021ರಂದು ನಡೆದ ಉದ್ಯಮಶೀಲತಾ ಮಾಹಿತಿ ಕಾರ್ಯಕ್ರಮದಲ್ಲಿ ಮಹಿಳಾ ಕಾನೂನುಗಳ ಮಾಹಿತಿ ನೀಡಲಾಯಿತು. ಈ ಕಾರ್ಯಕ್ರಮದಲ್ಲಿ ಮಹಿಳೆಯರು, ಪುರುಷರು ಸೇರಿ ಒಟ್ಟು 80 ಜನ ಭಾಗವಹಿಸಿದ್ದರು.

## ಚಿತ್ರದುರ್ಗ ಜಿಲ್ಲೆ



ಸುಗಮಕಾರರ ಸಮುಚ್ಚಯದ ಸಭೆಯು 15-1-2021, 27-3-2021ರಂದು ನಡೆಯಿತು. 27-3-2021ರಂದು ಮಹಿಳಾ ದಿನಾಚರಣೆಯು ನಡೆಯಿತು. ಸುಗಮಕಾರರ ಸ್ವಸಹಾಯ ಗುಂಪಿನ ರಚನೆ, 3ನೇ ಹಂತದ ಮಹಿಳಾ ಪ್ರಕರಣಗಳ ನಿರ್ವಹಣೆ ತರಬೇತಿಗೆ ಸಂಬಂಧಿಸಿ ಚರ್ಚಿಸಲಾಯಿತು.

## ಕೊಪ್ಪಳ ಜಿಲ್ಲೆ



ಸುಗಮಕಾರರ ಸಮುಚ್ಚಯದ ಸಭೆಯು 16-12-2020 ಮತ್ತು 21-3-2021ರಂದು ನಡೆಯಿತು. 21-3-2021ರಂದು ಮಹಿಳಾ ದಿನಾಚರಣೆಯನ್ನು ನಡೆಸಲಾಯಿತು. 3ನೇ ಹಂತದ ಮಹಿಳಾ ಪ್ರಕರಣಗಳ ನಿರ್ವಹಣೆ, ನಿರ್ವಹಿಸಿದ ಮಹಿಳಾ ಪ್ರಕರಣಗಳ ಬಗ್ಗೆ ಚರ್ಚಿಸಲಾಯಿತು.

# ಕರ್ನಾಟಕ ರಾಜ್ಯ ಪೂರಕ ಕಾನೂನು ಸುಗಮಕಾರರ ಸಮುಚ್ಚಯದ ಚಟುವಟಿಕೆಗಳು

ರಾಜ್ಯ ಸಮುಚ್ಚಯದ ಗೂಗಲ್ ಸಭೆಯು ಕ್ರಮವಾಗಿ 18-2-2021, 17-4-2021 ಮತ್ತು 30-7-2021ರಂದು ನಡೆಯಿತು. ತಳಮಟ್ಟದಲ್ಲಿ ಮಹಿಳಾ ಕಾನೂನುಗಳ ಅರಿವನ್ನು ಮೂಡಿಸುವುದು, ನೊಂದ ಮಹಿಳೆಯರ ಪ್ರಕರಣಗಳನ್ನು ಜಿಲ್ಲಾ ಸೇವಾ ಪ್ರಾಧಿಕಾರಕ್ಕೆ ಕಳುಹಿಸುವುದು, ಪ್ರಾಧಿಕಾರದ ಭೇಟಿ, ಪ್ರಾಧಿಕಾರಕ್ಕೆ ಅರ್ಜಿ ಸಲ್ಲಿಸಿ ಕಾನೂನು ಸೇವೆಗಳನ್ನು ಸೇವೆ ಪಡೆದ ಮಹಿಳೆಯರನ್ನು ಸಂದರ್ಶಿಸಿ ಅವರ ಅನುಭವ–ಅನಿಸಿಕೆಗಳನ್ನು ಪಡೆದುಕೊಳ್ಳುವುದು ಇತ್ಯಾದಿ ವಿಷಯಗಳ ಬಗ್ಗೆ ಚರ್ಚಿಸಲಾಯಿತು. ಸಭೆಯಲ್ಲಿ ಶಂಕರ್, ತಾಜುದ್ದೀನ್, ಮಲ್ಲಪ್ಪ (ಕೊಪ್ಪಳ) ಗಿರಿಜಾ ಪಾಟೀಲ್ ಫಕ್ಕೀರಮ್ಮ, ರೇಣುಕಾ ಚಬ್ಬಿ, ಅಶ್ವಿನಿ (ಗದಗ) ಸುಮಾ, ಶೋಭಾ (ಚಿತ್ರದುರ್ಗ), ಹರಿಣಿ, ವತ್ಸಲಾ (ದಕ್ಷಿಣಕನ್ನಡ), ಭಾಗ್ಯಶ್ರೀ ಕೆ. ಮಂಡ್ಯ ಭಾಗವಹಿಸಿದ್ದರು.

ಧಾರವಾಡದ ಪೂರಕ ಕಾನೂನು ಸುಗಮಕಾರರ ಗೂಗಲ್ ಸಭೆಯು ದಿನಾಂಕ 26–06–2021ರಂದು ನಡೆಯಿತು. ಇದರಲ್ಲಿ 15 ಮಂದಿ ಭಾಗವಹಿಸಿದ್ದರು. ಈ ಸಭೆಯಲ್ಲಿ ಕೊರೊನಾ 2ನೇ ಅಲೆಯ ಲಾಕ್‌ಡೌನ್ ಸಮಯದಲ್ಲಿ ಸುಗಮಕಾರರು ಹಮ್ಮಿಕೊಂಡ ಮಾಹಿತಿ ಕಾರ್ಯಕ್ರಮ ಮತ್ತು ಇತರ ಸೇವೆಗಳು, ಹಿಂಸೆಯಿಂದ ಬಳಲುತ್ತಿರುವ ಮಹಿಳೆಯರ ಪ್ರಕರಣ ನಿರ್ವಹಣೆಯ ಮಾಹಿತಿಯನ್ನು ಹಂಚಿಕೊಂಡರು.



## ಬದಲಾವಣೆಯ ಹೇಳಿಕೆಗಳು

ಉತ್ತರ ಕನ್ನಡ ಜಿಲ್ಲೆಯ ಹೊಸಪಟ್ಟಣದಲ್ಲಿ ಓರ್ವ ಮಹಿಳೆ ತಳಹಂತದ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಅವರು ಹೆಣ್ಣು ಗಂಡು ತಾರತಮ್ಯ ಬಗೆಗಿನ ಕರಪತ್ರವನ್ನು ಮನೆಗೆ ತೆಗೆದುಕೊಂಡು ಹೋಗಿದ್ದರು. ಅದನ್ನು ಓದಿದ ಅವರ ಮಗಳು ಅವಳ ತಂದೆಯ ಬಳಿ ತೋರಿಸಿ ಈ ಕರಪತ್ರವನ್ನು ಓದಿ, ಹಾಗೆಯೇ ನನ್ನನ್ನು ಮತ್ತು ತಮ್ಮನನ್ನು ಇನ್ನು ಮುಂದೆ ಸಮಾನವಾಗಿ ನೋಡಿಕೊಳ್ಳಬೇಕು ಮತ್ತು ಆಸ್ತಿಯನ್ನು ಸಮಾನವಾಗಿ ನೀಡಬೇಕು ಎಂದು ಹೇಳಿದರು.




**ಭಾಗಾರ್ಥಿ – ಉತ್ತರ ಕನ್ನಡ**

ಧಾರವಾಡ ಜಿಲ್ಲೆಯಲ್ಲಿ ಆಯೋಜಿಸಿದ್ದ ತಳಮಟ್ಟದ ಲಿಂಗತ್ವ ತರಬೇತಿ ಕಾರ್ಯಕ್ರಮದಲ್ಲಿ ನಾನು ಮತ್ತು ನನ್ನ ಅತ್ತೆ ಭಾಗವಹಿಸಿದ್ದೆವು. ಪೂರಕ ಕಾನೂನು ಸುಗಮಕಾರರು ಲಿಂಗತ್ವದ ಬಗ್ಗೆ ಮಾಹಿತಿ ನೀಡುತ್ತಿದ್ದಾಗ ನಾನು ಪೂರಕ ಕಾನೂನು ಸುಗಮಕಾರರಲ್ಲಿ ಹೇಳಿದೆ– ನನ್ನ ಅತ್ತೆಗೆ ನೀವು ಈ ವಿಷಯವನ್ನು ಸರಿಯಾಗಿ ಹೇಳಿ. ಯಾಕೆಂದರೆ ಅವರು ನನಗೆ ಹೇಳುತ್ತಾರೆ ಗಂಡು ಮಕ್ಕಳಿಗೆ ಜಾಸ್ತಿ ಕಾಳಜಿ ವಹಿಸಬೇಕು, ಅವರಿಗೆ ರುಚಿಯಾದ ಊಟ ಕೊಡಬೇಕು, ಮನೆ ಕೆಲಸ ಮಾಡಲು ಬಿಡಬಾರದು. ಗುಡಿಸುವುದು, ಅಡುಗೆ ಮಾಡುವುದು ಗಂಡು ಮಕ್ಕಳಿಗೆ ಗೌರವ ತರುವುದಿಲ್ಲ ಎಂದು. ಎಲ್ಲಾ ಕೆಲಸವನ್ನು ಹೆಣ್ಣು ಮಕ್ಕಳಿಂದ ಮಾಡಿಸುತ್ತಾರೆ. ಸಭೆಯಲ್ಲಿದ್ದ ಅತ್ತೆ ತಕ್ಷಣ ನಾನು ಇನ್ನು ಮುಂದೆ ಈ ರೀತಿ ನಡೆಯುವುದಿಲ್ಲ. ಈ ಮಾಹಿತಿ ತಿಳಿದ ನಂತರ ನನಗೆ ನನ್ನ ತಪ್ಪಿನ ಅರಿವಾಯಿತು ಎಂದರು.

**ಭಾಗಾರ್ಥಿ – ಧಾರವಾಡ**

ಧಾರವಾಡ ಜಿಲ್ಲೆಯ ಹುಬ್ಬಳ್ಳಿ ತಾಲೂಕಿನ ಸುತ್ತಗಟ್ಟಿ ಗ್ರಾಮದಲ್ಲಿ ತಳಮಟ್ಟದ ಮಾಹಿತಿ ಕಾರ್ಯಕ್ರಮದಲ್ಲಿ ಭಾಗವಹಿಸಿದವರೋರ್ವಳ ಗಂಡ ಅವಳಿಗೆ ದೈಹಿಕ ಮತ್ತು ಮಾನಸಿಕ ಹಿಂಸೆ ನೀಡುತ್ತಿದ್ದ. ಅವಳ ಗಂಡನಿಗೆ ದುಡಿಮೆ ಮತ್ತು ಸಂಪಾದನೆ ಇಲ್ಲದಿರುವುದರಿಂದ ಅವಳ ಸಂಪಾದನೆಯ ಹಣವನ್ನು ಪಡೆಯಲು ಈ ರೀತಿ ನಡೆದುಕೊಳ್ಳುತ್ತಿದ್ದನು. ಈ ವಿಷಯವನ್ನು ತಿಳಿದ 4 ಮಂದಿ ಪೂರಕ ಕಾನೂನು ಸುಗಮಕಾರರು ಅವರ ಗಂಡ ಮನೆಯಲ್ಲಿರುವಾಗಲೇ ಅಲ್ಲಿಗೆ ಹೋಗಿ ಕೌಟುಂಬಿಕ ದೌರ್ಜನ್ಯ ಬಗ್ಗೆ ಮಾಹಿತಿ ನೀಡಿದರು. ಕೌಟುಂಬಿಕ ದೌರ್ಜನ್ಯದ ಕರಪತ್ರವನ್ನು ಅವರ ಮನೆಯ ಗೋಡೆ ಮೇಲೆ ಹಾಕಿ ಅವರಿಗೆ ಅದರಲ್ಲಿರುವ ಹೆಂಡ್ತಿ ಮಕ್ಕಳನ್ನ ಹೊಡಿಬಾರ್ದ್‌ರಿ, ಹೊಡೆದರೆ ಗಂಡನ್ನ ಜೈಲಿಗೆ ಹಾಕ್ತಾರಿ ಎನ್ನುವುದನ್ನು ಓದಿ ಹೇಳಿದರು. ಹಿಂಸಿಸಿದರೆ ಜೈಲಿಗೆ ಹೋದರೆ ಸಮಾಜದಿಂದ ಮಾರ್ಯಾದೆ ಹೀನರಾಗುತ್ತಾರೆ ಎಂದು ಹೇಳಿದರು. ಈ ಮಾಹಿತಿ ನೀಡಿದ ಕೆಲವು ದಿನಗಳ ನಂತರ ಆ ಮಹಿಳೆ ಖುದ್ದಾಗಿ ಕಾನೂನು ಸುಗಮಕಾರರ ಬಳಿ ಬಂದು, ನೀವು ಬಂದು ಹೋದ ನಂತರ ನನ್ನ ಗಂಡ ನನಗೆ ಹಿಂಸೆ ಮಾಡುವುದನ್ನು ನಿಲ್ಲಿಸಿದ್ದಾನೆ. ಈಗ ನಮ್ಮ ಸಂಸಾರ ಚೆನ್ನಾಗಿದೆ ಎಂದರು. ಅದಕ್ಕಾಗಿ ಅವರು ಎಲ್ಲರಿಗೂ ಧನ್ಯವಾದ ತಿಳಿಸಿದರು.




ಧಾರವಾಡ ಜಿಲ್ಲೆಯ ಹುಬ್ಬಳ್ಳಿ ತಾಲೂಕಿನ ಗ್ರಾಮವೊಂದರಲ್ಲಿ ಇತ್ತೀಚಿಗೆ 16 ವಯಸ್ಸಿನ ಹುಡುಗಿಗೆ 38 ವಯನಸ್ಸಿನ ಹುಡುಗನ ಜೊತೆ ಮದುವೆ ಮಾಡಲು ಸಿದ್ಧತೆ ನಡೆದಿತ್ತು. ಈ ವಿಷಯ ತಿಳಿದ ಧಾರವಾಡ ಜಿಲ್ಲೆಯ ಪೂರಕ ಕಾನೂನು ಸುಗಮಕಾರರು ಆ ಹುಡುಗಿಯ ಮನೆಗೆ ಹೋಗಿ ಪಾಲಕರನ್ನು ಭೇಟಿ ಮಾಡಿ, ನಿಮ್ಮ ಮಗಳಿಗೆ ಕೇವಲ 16 ವರ್ಷ, ಈ ಮದುವೆ ಬಾಲ್ಯವಿವಾಹವಾಗುತ್ತದೆ. ಇದು ಕಾನೂನಿನ ಪ್ರಕಾರ ಅಪರಾಧ ಎಂದು ಹೇಳಿದರು. ಇದರಿಂದ ಪಾಲಕರು ಜೈಲು ಪಾಲಾಗುತ್ತಾರೆ. ಇದನ್ನು ತಿಳಿದಕೊಂಡ ಹುಡುಗಿಯ ಪಾಲಕರು ಮದುವೆ ಮಾಡುವುದಿಲ್ಲವೆಂದು ತಿಳಿಸಿದರು. ಹೀಗೆ ಆ ಹುಡುಗಿಯ ಬಾಲ್ಯವಿವಾಹ ನಿಂತುಹೋಯಿತು, ಆ ಹುಡುಗಿಯ ವಿದ್ಯಾಭ್ಯಾಸ ಮುಂದುವರಿಸಲು ಒಪ್ಪಿರುತ್ತಾರೆ.

ಮುಖಪುಟ ವಿನ್ಯಾಸ: ಸುನೈಫ್ ವಿಟ್ಲ          ಮುದ್ರಣ: ಪಿಕ್ಸೆಲ್ಸ್ ಡಿಸೈನರ್ಸ್, ಕುದ್ರೋಳಿ, ಮಂಗಳೂರು

DEEDS SAMVAADA - A Newsletter by DEEDS, Mangalore

ವಿಳಾಸ : ಡೆವಲಪ್‌ಮೆಂಟ್ ಎಜುಕೇಶನ್ ಸರ್ವಿಸ್ (ಡೀಡ್ಸ್), ಆನಂದ ಅಪಾರ್ಟ್‌ಮೆಂಟ್ಸ್, ಕದ್ರಿ, ಮಂಗಳೂರು, ದ.ಕ. 575002, ದೂರವಾಣಿ: 0824–2217022, 4281037
E-mail : deeds82@rediffmail.com          www.deedsmangaluru.in